# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1339
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಡಾ|| ತೇಜಸ್ವಿನಿ ಗೌಡ
ಉತ್ತರಿಸಬೇಕಾದ ದಿನಾಂಕ : 21/12/2018
ಉತ್ತರಿಸುವ ಸಚಿವರು : ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಅಲ್ಪ ಸಂಖ್ಯಾತರ ಕಲ್ಯಾಣ & ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಎಲ್ಲರಿಗೂ ಅವಶ್ಯವಿರುವ ಆಹಾರ ಸರಬರಾಜಿನ ಬಗ್ಗೆ ಸರ್ಕಾರಕ್ಕೆ ಖಾತ್ರಿ ಇದೆಯೆ; ಕೊರತೆ ಕಂಡು ಬಂದಿದೆಯೇ; ಎಲ್ಲಾ ನಾಗರೀಕರಿಗೂ ನಿಯಮಾನುಸಾರ ಆಹಾರ ಪಡಿತರ ಚೀಟಿ ವಿತರಣೆ ಆಗಿದೆಯೇ; ವಿತರಣೆ ಏನಾದರೂ ಬಾಕಿ ಇದೆಯೇ; | ಇದೆ. ರಾಜ್ಯದಲ್ಲಿ ಪಡಿತರ ಚೀಟಿಯನ್ನು ಹೊಂದಿರುವ ಎಲ್ಲಾ ಕುಟುಂಬಗಳಿಗೂ ಸರ್ಕಾರದ ನಿರ್ದೇಶನ ಹಾಗೂ ವಿತರಣಾ ಪ್ರಮಾಣದಂತೆ ಆಹಾರ ಧಾನ್ಯವನ್ನು ಉಚಿತವಾಗಿಯೂ ಹಾಗೂ ರಿಯಾಯಿತಿ ದರದಲ್ಲಿಯೂ ವಿತರಿಸಲಾಗುತ್ತಿದೆ.<br>ಪಡಿತರ ಚೀಟಿಗಳ ಫಲಾನುಭವಿಗಳಿಗೆ ವಿತರಿಸುವ ಆಹಾರಧಾನ್ಯಗಳ ಪ್ರಮಾಣದಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ.<br>ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಿಗೆ ಒಳಪಟ್ಟು ಅರ್ಹತೆಯನುಸಾರ ವರ್ಗವಾರು ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ. ಪ್ರಸ್ತುತ 182158 ಮಾತ್ರ ಅರ್ಜಿಗಳು ಬಾಕಿ ಇದ್ದು, ಸ್ಥಳ ಪರಿಶೀಲನೆಯೊಂದಿಗೆ ಇವುಗಳ ವಿಲೇವಾರಿ ಕಾರ್ಯವು ಕೂಡಾ ಪ್ರಗತಿಯಲ್ಲಿದೆ. ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸುವ ಹಾಗೂ ಸಲ್ಲಿಸಿರುವ ಅರ್ಜಿಯನ್ನು ವಿಲೇವಾರಿಗೊಳಿಸುವ ಕಾರ್ಯವನ್ನು ಇಲಾಖೆಯು ಸಂಪೂರ್ಣ ಗಣಕೀಕರಿಸಿ ಆನ್‌ಲೈನ್ ಮೂಲಕವೇ ನಿರ್ವಹಿಸಲಾಗುತ್ತಿದೆ. |
| ಆ) | ಆಹಾರ ಕಲಬೆರಕೆ ತಡೆಯಲು ಯಾವ ಕ್ರಮ ಕೈಗೊಳ್ಳಲಾಗಿದೆ; ಕಲಬೆರಕೆ ಅಪರಾಧಕ್ಕೆ ಶಿಕ್ಷೆ ಏನು; ಅಪರಾಧ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳೇನು; | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006, ನಿಯಮ ಮತ್ತು ನಿಬಂಧನೆಗಳು 2011 ರಾಜ್ಯದಲ್ಲಿ ಜಾರಿಯಲ್ಲಿದ್ದು, ಆಹಾರ ಕಲಬೆರಕೆ ಕಂಡು ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯ ಸೆಕ್ಷನ್ 52–64ರ ಅಡಿಯಲ್ಲಿ ಕ್ರಮ ಜರುಗಿಸಬಹುದಾಗಿರುತ್ತದೆ. (ಪ್ರತಿಯನ್ನು ಅನುಬಂಧ–01 ರಲ್ಲಿ ಲಗತ್ತಿಸಿದೆ). |
| ಇ) | ಶಾಲಾ ಕಾಲೇಜುಗಳ ಅಕ್ಕಪಕ್ಕದ ಅಂಗಡಿಗಳಲ್ಲಿ ಸಿದ್ಧ ಆಹಾರ ಪದಾರ್ಥಗಳಲ್ಲಿ ಮಾದಕ ದ್ರವ್ಯ ಬೆರೆಸಿ, ಮಕ್ಕಳನ್ನು ಮಾದಕ ದ್ರವ್ಯ ವ್ಯಸನಿಗಳನ್ನಾಗಿ ಮಾಡಲಾಗುತ್ತಿರುವ ಡ್ರಗ್ ಮಾಫಿಯಾ ದಂದೆಯ ಬಗ್ಗೆ ಇಲಾಖೆಗೆ ಮಾಹಿತಿ ಇದೆಯೆ; ಯಾವ ನಿಯಂತ್ರಣ ಕ್ರಮ ವಹಿಸಲಾಗಿದೆ. | ಈ ಪ್ರಶ್ನೆಯೂ ಮಾದಕ ದ್ರವ್ಯ ನಿಯಂತ್ರಣ ಆದೇಶಗಳಿಗೆ ಒಳಪಟ್ಟಿದ್ದು, ಸಂಬಂಧಪಟ್ಟ ಇಲಾಖೆಯಿಂದ ಉತ್ತರ ಪಡೆಯಬಹುದಾಗಿರುತ್ತದೆ. |
| ಈ) | ಹೋಟೆಲ್ ಹಾಗೂ ಬೀದಿ ಬದಿ ಮಾರಾಟವಾಗುವ ಆಹಾರ ಗುಣಮಟ್ಟ ಹಾಗೂ ಪ್ರಮಾಣ ಪರೀಕ್ಷೆ ನಿಯಮಿತವಾಗಿ ನಡೆಯುತ್ತಿದೆಯೇ; ತಪ್ಪಿತಸ್ಥರಿಗೆ ಯಾವ ರೀತಿಯ ಕಡಿವಾಣ ಹಾಕಲಾಗಿದೆ. | ಹೋಟೆಲ್ ಹಾಗೂ ಬೀದಿ ಬದಿ ಮಾರಾಟವಾಗುವ ಆಹಾರದ ಗುಣಮಟ್ಟ ಹಾಗೂ ಪ್ರಮಾಣ ಪರೀಕ್ಷೆ ನಿಯಮಿತವಾಗಿ ನಡೆಯುತ್ತಿದೆ.<br>ಹೋಟೆಲ್ ಮತ್ತು ಕರ್ನಾಟಕ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ಮಾನ್ಯ ಉಚ್ಚನ್ಯಾಯಾಲಯದಲ್ಲಿ (WP No. 25756–25757) ಎರಡನೇ ಅಧ್ಯಾಯದ ಕಲಂ 1.2.4, 1.2.1, ಷೆಡ್ಯೂಲ್–4ರ ಭಾಗ–2 ರ 5.1 ಹಾಗೂ ಕಲಂ–7 ರಡಿ ಆಹಾರ ನೋಂದಣಿ ಮತ್ತು ಪರವಾನಗಿ ಬಗ್ಗೆ ಅನುಚ್ಛೇಧ–50 ರಿಂದ 65 ರವರೆಗಿನ ಕಲಂ 2.2.2 Packing and Additives ಬಗ್ಗೆ ತಡೆಯಾಜ್ಞೆ ಪಡೆದಿದ್ದು, ಪ್ರಕರಣವು ವಿಚಾರಣೆಯಲ್ಲಿರುತ್ತದೆ.<br>ನಿಯಮಿತವಾಗಿ ಸರ್ಕಾರಿ ಹಾಗೂ ಮಾನ್ಯತೆ ಪಡೆದ ಖಾಸಗಿ ಪ್ರಯೋಗಾಲಯಗಳಿಂದ ಸರ್ಕಾರಿ ವೆಚ್ಚದಲ್ಲಿ ಆಹಾರ ಗುಣಮಟ್ಟ ಪರೀಕ್ಷೆ ಮಾಡಿಸಲಾಗುತ್ತಿದೆ. |

ಆನಾಸ 273 ಡಿಆರ್ಎ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

## ಅನುಬಂಧ-01

**ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅಡಿಯಲ್ಲಿ ಕಾಯ್ದೆಯ ಉಲ್ಲಂಘನೆಯಾಗುವ ಇತರೆ ಅಪರಾಧಗಳಿಗೆ ನೀಡಬಹುದಾದ ಶಿಕ್ಷೆ ಮತ್ತು ವಿಧಿಸಬಹುದಾದ ದಂಡಗಳ ವಿವರ.**

| | | |
|---|---|---|
| ಸೆಕ್ಷನ್ 50 | : | ಗ್ರಾಹಕರು ಅಪೇಕ್ಷೆ ಪಡುವ ಗುಣ ಹಾಗೂ ಸ್ವರೂಪ ಹೊಂದಿರದ ಆಹಾರ ವಸ್ತುವಿನ ಮಾರಾಟಗಾರರಿಗೆ ರೂ.5 ಲಕ್ಷ ಮೀರದ ದಂಡ. |
| ಸೆಕ್ಷನ್ 51 | : | ಕಡಿಮೆ ಗುಣಮಟ್ಟದ ಆಹಾರ ವಸ್ತುವಿನ ತಯಾರಿಕೆ, ವಿತರಣೆ ಮಾರಾಟದಲ್ಲಿ ನಿರತವಾಗಿರುವವರಿಗೆ ರೂ.5 ಲಕ್ಷದವರೆಗೆ ಮೀರದ ದಂಡ. |
| ಸೆಕ್ಷನ್ 52 | : | ತಪ್ಪು ಮಾಹಿತಿ ಹೊಂದಿದ ಆಹಾರ ವಸ್ತುವಿನ ತಯಾರಿಕೆ, ವಿತರಣೆ ಮಾರಾಟದಲ್ಲಿ ನಿರತವಾಗಿರುವವರಿಗೆ ರೂ.3 ಲಕ್ಷ ಮೀರದ ದಂಡ. |
| ಸೆಕ್ಷನ್ 53 | : | ಬಳಕೆದಾರರ ದಾರಿ ತಪ್ಪಿಸುವ ಪ್ರಚಾರ ಮಾಡಿದಲ್ಲಿ ರೂ.10 ಲಕ್ಷ ಮೀರದ ದಂಡ. |
| ಸೆಕ್ಷನ್ 54 | : | ಇತರೆ ವಸ್ತುಗಳನ್ನು ಹೊಂದಿರುವ ಆಹಾರ ವಸ್ತುವಿನ ವಿತರಣೆ ಮಾರಾಟದಲ್ಲಿ ನಿರತವಾಗಿರುವವರಿಗೆ ರೂ.1 ಲಕ್ಷದವರೆಗೆ ಮೀರದ ದಂಡ. |
| ಸೆಕ್ಷನ್ 55 | : | ಆಹಾರ ಸುರಕ್ಷತಾ ಅಧಿಕಾರಿ ನೀಡಿದ ಸೂಚನೆ ಪಾಲಿಸದೇ ಇದ್ದರೆ ರೂ.2 ಲಕ್ಷ ಮೀರದ ದಂಡ. |
| ಸೆಕ್ಷನ್ 56 | : | ಅನೈರ್ಮಲ್ಯ ಮತ್ತು ಅಸುರಕ್ಷತೆ ಸ್ಥಳದಲ್ಲಿ ಆಹಾರ ವಸ್ತುಗಳ ತಯಾರಿಕೆ, ವಿತರಣೆ ಮಾರಾಟದಲ್ಲಿ ನಿರತವಾಗಿರುವವರಿಗೆ ರೂ.1 ಲಕ್ಷದವರೆಗೆ ಮೀರದ ದಂಡ. |
| ಸೆಕ್ಷನ್ 57 | : | ಕಲಬೆರಕೆ ಆಹಾರ ವಸ್ತುಗಳನ್ನು ಹೊಂದಿದ್ದರೆ<br>1. ಅದು ಆರೋಗ್ಯಕ್ಕೆ ಹಾನಿಕರಕವಾಗಿದ್ದರೆ ರೂ.10 ಲಕ್ಷದವರೆಗೆ ಮೀರದ ದಂಡ.<br>2. ಆರೋಗ್ಯಕ್ಕೆ ಹಾನಿಕರಕವಲ್ಲದಿದ್ದರೆ ರೂ.2 ಲಕ್ಷದವರೆಗೆ ಮೀರದ ದಂಡ. |
| ಸೆಕ್ಷನ್ 58 | : | ಈ ಕಾಯ್ದೆಯಡಿ ಯಾವುದೇ ದಂಡ ವಿಧಿಸಲಾದ ಅಪರಾಧಕ್ಕೆ ಹೊರತುಪಡಿಸಿದ ಅಪರಾಧ ಎಸಗಿದವರಿಗೆ ರೂ.2 ಲಕ್ಷದವರೆಗೆ ಮೀರದ ದಂಡ. |
| ಸೆಕ್ಷನ್ 59 | : | 1. ಅಸುರಕ್ಷಿತ ಆಹಾರ ವಸ್ತುಗಳ ತಯಾರಿಕೆ ಸಂಗ್ರಹ ತಯಾರಿಕೆ, ವಿತರಣೆ ಮಾರಾಟದಲ್ಲಿ ನಿರತವಾಗಿರುವವರಿಗೆ 6 ತಿಂಗಳ ಸೆರೆವಾಸ ಮತ್ತು ರೂ.1 ಲಕ್ಷದವರೆಗೆ ದಂಡ.<br>2. ತೀವ್ರವಲ್ಲದ ತೊಂದರೆ: ಒಂದು ವರ್ಷ ಶಿಕ್ಷೆ ಮತ್ತು 3 ಲಕ್ಷದವರೆಗೆ ದಂಡ.<br>3. ತೀವ್ರವಾದ ತೊಂದರೆ: ಆರು ವರ್ಷಗಳ ಶಿಕ್ಷೆ ಮತ್ತು 5 ಲಕ್ಷದವರೆಗೆ ದಂಡ.<br>4. ಸಾವು ಸಂಭವಿಸಿದರೆ: ಏಳು ವರ್ಷಕ್ಕಿಂತ ಕಡಿಮೆಯಿಲ್ಲದ ಸೆರೆವಾಸ ಅಥವಾ ಜೀವವಾಧಿ ಮತ್ತು 10 ಲಕ್ಷಕ್ಕಿಂತ ಕಡಿಮೆ ಇಲ್ಲದ ದಂಡ |
| ಸೆಕ್ಷನ್ 60 | : | ಜಪ್ತಿ ಮಾಡಿದ ಆಹಾರ ವಸ್ತುಗಳಿಗೆ ಹಾನಿಯನ್ನುಂಟು ಮಾಡಿದರೆ 6 ತಿಂಗಳವರೆಗೆ ಸೆರೆವಾಸ ಮತ್ತು 2 ಲಕ್ಷದವರೆಗೆ ದಂಡ. |
| ಸೆಕ್ಷನ್ 61 | : | ಸುಳ್ಳು ಮಾಹಿತಿ ನೀಡಿದವರಿಗೆ 3 ತಿಂಗಳ ಸೆರೆವಾಸ ಮತ್ತು 2 ಲಕ್ಷ ರೂಪಾಯಿಗಳವರೆಗೆ ದಂಡ. |
| ಸೆಕ್ಷನ್ 62 | : | ಆಹಾರ ಸುರಕ್ಷತಾ ಅಧಿಕಾರಿಯ ಕಾರ್ಯದಲ್ಲಿ ತಡೆ ಒಡ್ಡಿದರೆ 3 ತಿಂಗಳವರೆಗೆ ಸೆರೆವಾಸ 1 ಲಕ್ಷದವರೆಗೆ ದಂಡ. |
| ಸೆಕ್ಷನ್ 63 | : | ಕಾಯ್ದೆಯ ಪ್ರಕಾರ ಪರವಾನಗಿ ಪಡೆಯದೇ ಇದ್ದರೆ 6 ತಿಂಗಳವರೆಗೆ ಸೆರೆವಾಸ ಮತ್ತು 5 ಲಕ್ಷದವರೆಗೆ ಜುಲ್ಮಾನೆ. |
| ಸೆಕ್ಷನ್ 64 | : | ಅಪರಾಧ ಪುನಾರಾವರ್ತನೆ ಆದಲ್ಲಿ ಮುಂಚೆ ವಿಧಿಸಿದ ಶಿಕ್ಷೆ ಹಾಗೂ ದಂಡದ ದುಪ್ಪಟ್ಟು. |